ಪೂರ್ವ ಪ್ರಾಥಮಿಕ ತರಗತಿಯಲ್ಲಿ ಭಾಷಾ ಬೋಧನೆ | ಓದುವಿಕೆ ಹಾಗು ಬರವಣಿಗೆ

ರೋಷನಿ ದೇವಾಂಗನ್

ನಮ್ಮ ಯೋಚನೆಗಳನ್ನು ಹಾಗೂ ಭಾವನೆಗಳನ್ನು ಹಂಚಿಕೊಳ್ಳಲು, ಸಾಮಾಜಿಕ ಸಂಪರ್ಕಗಳನ್ನು ಹಾಗು ಸಂಬಂಧಗಳನ್ನು ಬೆಳೆಸಲು ಮತ್ತು ನಿರ್ವಹಿಸಲು ಹಾಗೂ ನಮ್ಮ ಸಮಾಜ ಮತ್ತು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಭಾಷೆಯು ನಮಗೆ ನೆರವಾಗುತ್ತದೆ. ಆರಂಭದಲ್ಲಿ ಭಾಷೆಯನ್ನು ಬಳಸಿ ಈ ಎಲ್ಲವುಗಳನ್ನು ಮಾಡಲು ಮಕ್ಕಳಿಗೆ ಸಾಧ್ಯವಾಗುವುದಿಲ್ಲ, ಆದರೆ ಅವರು ಬೆಳೆದಂತೆ ಅವರ ಭಾಷಾ ಕೌಶಲ್ಯ ಬೆಳೆಯುತ್ತದೆ ಹಾಗೂ ಮೇಲೆ ಹೇಳಿದ ಎಲ್ಲಾ ಉದ್ದೇಶಗಳಿಗೆ ಭಾಷೆಯನ್ನು ಬಳಸಲು ಅವರು ಆರಂಭಿಸುತ್ತಾರೆ.

ಶಾಲಾಪೂರ್ವ ಅವಧಿಯ ಬಹುತೇಕ ಎಲ್ಲಾ ಚಟುವಟಿಕೆಗಳಲ್ಲಿ ಸಂವಹನ ಒಂದು ಭಾಗವಾಗಿರುತ್ತದೆ. ಆಟ ಆಡುವಾಗಲೂ ಮಕ್ಕಳು ಮಾತುಗಳ ಮೂಲಕ ತಮ್ಮ ಕ್ರಿಯೆಗಳನ್ನು ವಿಮರ್ಶಿಸುತ್ತಿರುತ್ತಾರೆ. ತಮ್ಮ ದೈನಂದಿನ ಚಟುವಟಿಕೆಗಳು, ತಮ್ಮ ಕುಟುಂಬ ಮತ್ತು ಆಟಿಕೆಗಳ ಬಗ್ಗೆ ವಿವರಿಸುತ್ತಲೂ ಇರುತ್ತಾರೆ. ಈ ಮಾತುಗಳ ಮೂಲಕವೇ ಅವರು ಹೊಸ ಜನರ ಸಂಪರ್ಕಕ್ಕೆ ಬರುವುದು ಹಾಗು ಇದರಿಂದಾಗಿಯೇ ಅವರ ಪರಿಚಯಗಳು ಹೆಚ್ಚುತ್ತವೆ. ಮಾತನಾಡುವಿಕೆ ಹಾಗೂ ಆಲಿಸುವಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದಾಗ ಮಾತ್ರ ಮಕ್ಕಳು ಭಾಷೆಯನ್ನು ಬಳಸಲು ಕಲಿಯುತ್ತಾರೆ. ಮಾತನಾಡಲು ಹಾಗೂ ಆಲಿಸಲು ಪ್ರೋತ್ಸಾಹಿಸಿದಾಗಲಷ್ಟೇ ಅಂತಹ ಮಕ್ಕಳು ಉತ್ತಮ ಭಾಷಾ ಸಾಮರ್ಥ್ಯಗಳನ್ನು ಪ್ರದರ್ಶಿಸುತ್ತಾರೆ. ಮಕ್ಕಳ ಭಾಷಾ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದಕ್ಕೆ ನಮ್ಮ ಸಂಭಾಷಣೆಗಳು ಅವರಿಗೆ ಅನುಗುಣವಾಗಿ ಇರಬೇಕಾಗಿರುವುದು ಅವಶ್ಯಕ. ನಮ್ಮೊಡನೆ ಮಾತನಾಡುವುದನ್ನು ಅವರು ಖುಷಿಪಟ್ಟರೆ ಅವರು ಭಾಷೆಯ ಕಲಿಕೆಯಲ್ಲಿ ಉತ್ಸಾಹ ತೋರಿಸುತ್ತಾರೆ ಹಾಗೂ ಅವರ ಪದಸಂಪತ್ತೂ ಬೆಳೆಯುತ್ತದೆ.

ಇಂತಹ ಕೆಲವು ತತ್ವಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಶಾಲಾಪೂರ್ವ ಹಂತದ ಮಕ್ಕಳ ಓದುವಿಕೆ ಹಾಗೂ ಬರವಣಿಗೆಯ ಕೌಶಲ್ಯಗಳ ಬೆಳವಣಿಗೆಯತ್ತ ನಾವು ಗಮನಹರಿಸಿದೆವು. ತರಗತಿಯಲ್ಲಿ ಭಾಷಾಕಲಿಕೆಯ ಹಲವಾರು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಯಿತು. ಇದರಿಂದ ಮಕ್ಕಳಲ್ಲಿ ಆಸಕ್ತಿ ಹಾಗೂ ಉತ್ಸಾಹವೂ ಮೂಡಿತು ಹಾಗೂ ನಿಘಂಟಿನ ಬಳಕೆಯು ಹೆಚ್ಚಾಯಿತು. ಈ ಹಂತದ ಮಕ್ಕಳಲ್ಲಿ ಓದುವಿಕೆ ಹಾಗೂ ಬರವಣಿಗೆಯ ಕೌಶಲ್ಯಗಳು ಅದ್ಭುತವಾಗಿ ಬೆಳೆದಿದ್ದನ್ನು ನಾವು ಕಂಡೆವು. ಭಾಷೆಯನ್ನು ಕಲಿಸುವಾಗ ತರಗತಿಯಲ್ಲಿ ಹಲವಾರು ಚಟುವಟಿಕೆಗಳನ್ನು ಕೈಗೊಂಡ ಬಗೆಯನ್ನು ತಿಳಿಯುವುದಕ್ಕೆ ಪ್ರಯತ್ನಿಸೋಣ.

ಭಾಷೆಯ ಬೋಧನೆ

ಮಕ್ಕಳು ಶಾಲೆಗೆ ಬರುವ ಮುಂಚೆಯೇ ತಮ್ಮದೇ ಆದ ಭಾಷಾ ಸಂಪತ್ತನ್ನು ಹೊಂದಿರುತ್ತಾರೆ. ಈ ವಯಸ್ಸಿನ ಮಕ್ಕಳು ತಮ್ಮ ಭಾಷೆಯಲ್ಲಿಯೇ ಉತ್ತಮವಾಗಿ ಅಭಿವ್ಯಕ್ತಪಡಿಸುತ್ತಾರೆ. ಮಕ್ಕಳು ತಮ್ಮ ಮಾತೃಭಾಷೆಯನ್ನು ಚೆನ್ನಾಗಿ ಅರಿತಿರುತ್ತಾರೆಯಾದ್ದರಿಂದ ಅದರಲ್ಲಿಯೇ ವ್ಯಕ್ತಪಡಿಸುವುದು ಸಾಧ್ಯವಾಗುತ್ತದೆ. ಮನೆಯ ಭಾಷೆಯ ಮೇಲೆ ಅವರು ಉತ್ತಮ ಹಿಡಿತವನ್ನು ಹೊಂದಿರುತ್ತಾರೆ ಎಂದು ಹೇಳಬಹುದು. ಈಗ ಅವನ/ ಅವಳ ಮನೆಯ ಭಾಷೆಗೆ ಪ್ರಾಮುಖ್ಯತೆಯನ್ನು ಕೊಡುತ್ತಲೇ ಶಾಲೆಯ ಭಾಷೆಯನ್ನೂ ಕಲಿಯುವುದಕ್ಕೆ ಮಗುವನ್ನು ಪ್ರೋತ್ಸಾಹಿಸುವುದು ಶಿಕ್ಷಕರ ಜವಾಬ್ದಾರಿ.

ತರಗತಿಯಲ್ಲಿ ಮಕ್ಕಳು ತಮ್ಮ ಭಾಷೆಯಲ್ಲಿ ತಮ್ಮನ್ನು ತಾವು ವ್ಯಕ್ತಪಡಿಸುತ್ತಾರೆ ಎನ್ನುವ ವಾಸ್ತವಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲಾಗುತ್ತದೆ. ಅವರ ಭಾಷೆ, ಅವರ ಯೋಚನೆಗಳನ್ನು ಬಹಳ ಗಮನವಿಟ್ಟು ಗೌರವದಿಂದ ಹಾಗೂ ತಾಳ್ಮೆಯಿಂದ ಕೇಳಿಸಿ–ಕೊಳ್ಳಲಾಗುತ್ತದೆ. ಇದರ ಜೊತೆಯಲ್ಲೇ ನಾವು (ಶಿಕ್ಷಕರು) ಕ್ರಮೇಣ ಅವರ ಭಾಷೆ ಹಾಗೂ ಕಲ್ಪನೆಗಳನ್ನು ಶಾಲೆಯ ಔಪಚಾರಿಕ ಭಾಷೆಗೆ ಬದಲಾಯಿಸಲು ಪ್ರಯತ್ನಿಸಿದಾಗ ಮಕ್ಕಳು ತರಗತಿಗೆ ಹಾಗೂ ಶಾಲೆಯೊಂದಿಗೆ ನಿಧಾನವಾಗಿ ಸಂಬಂಧವನ್ನು ಬೆಳೆಸಿಕೊಳ್ಳುತ್ತಾರೆ. ವಿವಿಧ ಪದ್ಯಗಳನ್ನು ಮತ್ತು ಕಥೆಗಳನ್ನು ಕೇಳಿಸಿಕೊಳ್ಳುವಾಗ ಹಾಗೂ ಚಟುವಟಿಕೆಗಳನ್ನು ಮಾಡುವ ಸಮಯದಲ್ಲಿಯೇ ಮಕ್ಕಳಿಗೆ ಮಾತನಾಡಲು ಮತ್ತು ಕೇಳಿಸಿಕೊಳ್ಳಲು ಅವಕಾಶ ಕೊಡಲಾಗುತ್ತದೆ.

ಓದಲು ಕಲಿಯುವುದು

ಈ ರೀತಿಯಾಗಿ ಆರಂಭದ ಮೂರು ತಿಂಗಳ ಅವಧಿಯಲ್ಲಿ ಮೌಖಿಕ ಸಂಭಾಷಣೆ, ಪದ್ಯಗಳು ಹಾಗೂ ಕಥೆಗಳ ಮೂಲಕ ಬಹಳಷ್ಟು ಅಭ್ಯಾಸವನ್ನು ಮಾಡಿಸಲಾಯಿತು. ಆನಂತರ ಗಮನವನ್ನು ಓದುವಿಕೆ ಹಾಗೂ ಬರವಣಿಗೆಯ ಕೌಶಲ್ಯಗಳ ಬೆಳವಣಿಗೆಯ ಮೇಲೆ ಕೇಂದ್ರೀಕರಿಸಲಾಯಿತು. ಈ ಪ್ರಕ್ರಿಯೆಯು ಮೊದಲು ಒಂದು ಪದ್ಯದೊಂದಿಗೆ ಆರಂಭವಾಯಿತು. ಮಕ್ಕಳಿಗೆ ಮೊದಲೇ ಇದರ ಪರಿಚಯವಿತ್ತು.

ಮಛಲಿ ಜಲ್ ಕಿ ರಾಣಿ ಹೇ,
ಜೀವನ್ ಉಸ್ಕಾ ಪಾನಿ ಹೇ।
ಹಾಥ್ ಲಗಾವೋ ಡರ್ ಜಾತಿ ಹೇ,
ಬಾಹರ್ ನಿಕಾಲೊ ಮರ್ ಜಾತಿ ಹೇ।

ಈ ಪದ್ಯವನ್ನು ಮಕ್ಕಳು ಶಾಲೆಗೆ ಬರುವ ಮುನ್ನವೇ ತಮ್ಮ ಅಮ್ಮ, ಅಪ್ಪ ಅಥವಾ ನೆರೆಹೊರೆಯ ಗೆಳೆಯರಿಂದ ಕೇಳಿ ಚೆನ್ನಾಗಿ ತಿಳಿದುಕೊಂಡಿದ್ದರು.

ಈ ಪದ್ಯವನ್ನು ಮಕ್ಕಳ ಮುಂದೆ ಆಂಗಿಕ, ಲಯ ಹಾಗೂ ಅಭಿನಯದ ಮೂಲಕ ಓದಲಾಯಿತು. ಮಕ್ಕಳು ಜೊತೆಜೊತೆಯಲ್ಲೇ ಉತ್ಸಾಹದಿಂದ ಪುನರಾವರ್ತಿಸುತ್ತಿದ್ದರು. ಇದರಿಂದ ಮಕ್ಕಳು ಈ ಪದ್ಯವನ್ನು ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಹಾಗೂ

ಅಭಿನಯಿಸುವುದಕ್ಕೆ ಸಹಾಯವಾಯಿತು. ಈಗ ಮಕ್ಕಳು ಪದ್ಯವನ್ನು ತಾವಾಗಿಯೇ ಹಾಡಿಕೊಳ್ಳುತ್ತ ಅಭಿನಯಿಸುತ್ತಿದ್ದರು. ಎರಡು ಅಥವಾ ಮೂರು ದಿನಗಳ ನಂತರ ಪದ್ಯವನ್ನು ಒಂದು ದೊಡ್ಡ ಹಾಳೆಯ ಮೇಲೆ ಬರೆದು ಮಕ್ಕಳು ಪ್ರತಿದಿನವೂ ಈ ಪದ್ಯವನ್ನು ನೋಡುವಂತೆ ತರಗತಿಯಲ್ಲಿ ಪ್ರದರ್ಶಿಸಲಾಯಿತು. ಬಹಳ ದಿನಗಳವರೆಗೆ ಶಿಕ್ಷಕಿಯು ಪದ್ಯದಲ್ಲಿರುವ ಪ್ರತಿಯೊಂದು ಪದದ ಮೇಲೆ ಬೆರಳನ್ನಿಟ್ಟು ಸೂಚಿಸುತ್ತ ಈ ಪದ್ಯವನ್ನು ಕಲಿಸಿದರು. ಶಿಕ್ಷಕರು ಪದಗಳ ಮೇಲೆ ತಮ್ಮ ಬೆರಳನ್ನು ಇಟ್ಟು ಮತ್ತೆ ಮತ್ತೆ ಅವುಗಳ ಬಗ್ಗೆ ಮಕ್ಕಳನ್ನು ಪ್ರಶ್ನಿಸುತ್ತಿದ್ದರು. ಮುದ್ರಿತವಾದ ಪದಗಳನ್ನು ಗುರುತಿಸಿ ಓದುವುದಕ್ಕೆ ಸಹಾಯವಾಗುವಂತೆ ಪದಗಳನ್ನು ಓದಲು ಅವರನ್ನು ಪ್ರೋತ್ಸಾಹಿಸಲಾಯಿತು. ಮಛಲಿ, ರಾಣಿ, ಪಾನಿ, ಹಾಥ್ ಮುಂತಾದ ಚಿತ್ರಿಸಬಹುದಾದ ಪದಗಳನ್ನು ಮೊದಲು ಗುರುತಿಸಲಾಯಿತು. ಆನಂತರ ಅವರು ಜಾತಿ ಹೇ, ಉಸ್ಕಾ, ಬಾಹರ್ ಮೊದಲಾದ ಚಿತ್ರಿಸಲಾಗದ ಪದಗಳನ್ನೂ ಗುರುತಿಸತೊಡಗಿದರು. ಇದಾದನಂತರ ಮತ್ತೊಂದು ಪದ್ಯವನ್ನು ತೆಗೆದುಕೊಳ್ಳಲಾಯಿತು. ಈ ಪದ್ಯಕ್ಕೂ ಅದೇ ವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಇದನ್ನೂ ದೊಡ್ಡ ಹಾಳೆಯ ಮೇಲೆ ಬರೆದು ಮಕ್ಕಳು ಅದನ್ನು ಓದಿ ಆನಂತರ ಮುದ್ರಿತಗೊಂಡ ಪದಗಳನ್ನು ಗುರುತಿಸುವುದಕ್ಕೆ ಅನುಕೂಲವಾಗುವಂತೆ ತರಗತಿಯಲ್ಲಿ ಪ್ರದರ್ಶಿಸಲಾಯಿತು. ಕ್ರಮೇಣವಾಗಿ ಮಕ್ಕಳು ಕೆಲವು ಪದಗಳನ್ನು ಗುರುತಿಸತೊಡಗಿದರು. ಆನಂತರ ಎರಡು ಪದ್ಯಗಳಿಂದ ಕೆಲವು ಪದಗಳನ್ನು ಆರಿಸಿ ದೊಡ್ಡ ಹಾಳೆಯ ಮೇಲೆ ಬರೆದು ಪ್ರದರ್ಶಿಸಲಾಯಿತು. ಮಕ್ಕಳು ಮತ್ತೆ ಮತ್ತೆ ಅವುಗಳನ್ನು ಓದುತ್ತಿದ್ದಂತೆ ಪದಗಳನ್ನು ಗುರುತಿಸಲು ಸಾಧ್ಯವಾಯಿತು.

ಆಲೂ ಕಚಾಲೂ ಬೇಟಾ ಕಹಾಂ ಗಯೇ ಥೇ,
ಸಬ್ಜಿ ಕಿ ಟೋಕರಿ ಮೇ ಸೋ ರಹೇ ಥೇ।
ಬೈಂಗನ್ ನೇ ಲಾತ್ ಮಾರಿ ರೋ ರಹೇ ಥೇ,
ಮಮ್ಮಿ ನೇ ಪ್ಯಾರ್ ಕಿಯಾ ಹಸ್ ರಹೇ ಥೇ।

ಈಗ ಈ ಪದಗಳಲ್ಲಿ ಚಿತ್ರಿಸಬಹುದಾದಂತಹ ಪದಗಳನ್ನು ಆರಿಸಿಕೊಂಡು ಅವುಗಳ ಫಲಕಗಳನ್ನು ಮಾಡಿದೆವು. ಪ್ರತಿದಿನವೂ ಒಂದು ಬಾರಿ ಫಲಕಗಳನ್ನು ಓದಲಾಗುತ್ತಿತ್ತು. ಶಿಕ್ಷಕರು ಎಲ್ಲ ಫಲಕಗಳನ್ನು ಹಿಡಿದು ಓದುವ ಆಟವನ್ನು ವಿನ್ಯಾಸ-ಗೊಳಿಸಲಾಯಿತು. ಶಿಕ್ಷಕಿಯು ವಸ್ತುವಿನ ಹೆಸರಿರುವ ಫಲಕವನ್ನು ಮಕ್ಕಳ ಎದುರು ಹಿಡಿಯುತ್ತಿದ್ದರು. ಅದನ್ನು ನೋಡಿ ಪಟ್ಟಿಯ ಮೇಲೆ ಏನು ಬರೆದಿದೆ ಎಂದು ಹೇಳುವಂತೆ ಮಕ್ಕಳನ್ನು ಕೇಳಲಾಗುತ್ತಿತ್ತು. ಉತ್ತರ ಹೇಳಿದ ಮೊದಲ ಮಗುವಿಗೆ ಒಂದು ಪಟ್ಟಿಯನ್ನು ಕೆಲಕಾಲದವರೆಗೆ ಇಟ್ಟುಕೊಳ್ಳಲು ಅವಳಿಗೆ/ಅವನಿಗೆ ಕೊಡಲಾಗುತ್ತಿತ್ತು. ಈ ಹಂತದಲ್ಲಿ ಕೆಲವು ಮಕ್ಕಳ ಕಲಿಕಾ ಮಟ್ಟ ಕಡಿಮೆ ಇದ್ದರೂ ಅಂತಹ ಮಕ್ಕಳಿಗೆ ಸುಲಭವಾಗಿ ಗುರುತಿಸ-ಬಹುದಾದ ಪಟ್ಟಿಗಳನ್ನು ತೋರಿಸಬೇಕೆಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಲಾಗುತ್ತಿತ್ತು. ಅಂತಹ ಮಕ್ಕಳಷ್ಟೇ ಉತ್ತರ ಹೇಳಿ ಪಟ್ಟಿಯನ್ನು ಹೊಂದುವ ಅವಕಾಶ ದೊರೆಯುವಂತೆ ತರಗತಿಯ ಉಳಿದ ಮಕ್ಕಳಿಗೆ ಸುಮ್ಮನಿರಲು ತಿಳಿಹೇಳಲಾಗುತ್ತಿತ್ತು.

ಫಲಕವನ್ನು ಓದುವ ಪ್ರಕ್ರಿಯೆಯು ನಿರಂತರವಾಗಿ ಮುಂದುವರಿದಂತೆ ಮಕ್ಕಳು ಎಲ್ಲ ಫಲಕಗಳನ್ನು ಓದುವುದಕ್ಕೆ ಕಲಿತರು. ಒಂದು ಫಲಕವನ್ನು ಓದಿದ ನಂತರ ಮಕ್ಕಳು ಹಲಗೆಯ ಮೇಲೆ ಪದಗಳನ್ನು ಬರೆದಾಗ ಅವರ ಬರವಣಿಗೆಯ ಕಲಿಕೆಯು ಆರಂಭವಾಯಿತು. ಇದೇ ಸರಣಿಯನ್ನು ಮುಂದುವರಿಸುತ್ತಾ ಪದಗಳ ಗುರುತಿಸುವಿಕೆಯ ಪ್ರಕ್ರಿಯೆಯನ್ನು ಮುಂದುವರೆಸಿ ಸಣ್ಣ ಪದ್ಯಗಳಿಂದ ಹಾಗೂ ಕಥೆಗಳಿಂದ ಕೆಲವು ನಿರ್ದಿಷ್ಟ ಪದಗಳನ್ನು ಆರಿಸಿದೆವು. ಈಗ ನಮ್ಮ ಬಳಿ ಮಕ್ಕಳು ಗುರುತಿಸಿದ ಹಲವಾರು ಪದಗಳಿದ್ದವು.

ಗುಣಿತಾಕ್ಷರಗಳ ಪರಿಚಯಿಸುವಿಕೆ

ಈ ಹಂತದಲ್ಲಿ ನಾವೊಂದು ಹೊಸ ಸವಾಲನ್ನು ಎದುರಿಸಿದೆವು. ಮಕ್ಕಳು ತಮಗೆ ಮೊದಲೇ ತಿಳಿದ ಪದಗಳನ್ನಷ್ಟೇ ಓದಬಲ್ಲವರಾಗಿದ್ದರು ಹಾಗೂ ತಿಳಿದಿರದ ಹೊಸ ಪದಗಳನ್ನು ಅವರಿಂದ ಓದಲಾಗಲಿಲ್ಲ. ಈ ಸವಾಲನ್ನು ನಿವಾರಿಸಲು ಅಕ್ಷರಗಳನ್ನು ಗುರುತಿಸುವ ಕೆಲಸದ ಜೊತೆಗೆ 'ಸಂಪೂರ್ಣ ಭಾಷಾ ಬೋಧನಾ ವಿಧಾನ'ವನ್ನು ಅಳವಡಿಸಿಕೊಂಡೆವು. ಮಕ್ಕಳು ಕಲಿತ ಪದಗಳಲ್ಲಿನ ಅಕ್ಷರಗಳನ್ನು ಬೇರ್ಪಡಿಸಿದೆವು. ಉದಾಹರಣೆಗೆ ಮಛಲಿ ಎನ್ನುವುದನ್ನು ಮ ಛ ಲಿ ಎಂದೂ ಗಮಲಾ ಅನ್ನು ಗ ಮ ಲಾ ಎಂದೂ ಅನಾರ ಅನ್ನು ಅ ನಾ ರ ಎಂದೂ ಹಾಗೂ ಘರ್ ಅನ್ನು ಘ ರ್ ಎಂದು ಬೇರ್ಪಡಿಸಿದಾಗ ಅಕ್ಷರಗಳನ್ನು ಗುರುತಿಸಲು ಆರಂಭಿಸಿದರು. ಹೀಗೆ ಅಕ್ಷರಗಳ ಗುರುತಿಸುವಿಕೆಯ ಪ್ರಕ್ರಿಯೆಯು ಪದಗಳಿಂದಲೇ ಆರಂಭವಾಯಿತು. ಮಕ್ಕಳು ಅಕ್ಷರ ಗುರುತಿಸುವಿಕೆಯ ಪ್ರಕ್ರಿಯೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡ ನಂತರ ತಾವಾಗಿಯೇ ಅಕ್ಷರಗಳನ್ನು ಗುರುತಿಸಲು ಆರಂಭಿಸಿದರು. ಕೆಲವು ದಿನಗಳಲ್ಲಿಯೇ ಮಕ್ಕಳು ೩೦ರಿಂದ ೩೫ ಅಕ್ಷರಗಳನ್ನು ಗುರುತಿಸಲು ಆರಂಭಿಸಿದರು ಹಾಗೂ ಅಕ್ಷರಗಳನ್ನು ವಿಭಾಗಿಸಿ ಊಹಿಸುವುದರ ಮೂಲಕ ಹೊಸಪದಗಳನ್ನು ಓದಲು ಪ್ರಯತ್ನಿಸಿದರು. ಈ ಪ್ರಕ್ರಿಯೆಯನ್ನು ಮುಂದುವರೆಸಿದಾಗ ನಮಗೆ ಹೊಸದೊಂದು ಸವಾಲು ಎದುರಾಯಿತು. ಮಕ್ಕಳಿಗೆ ಪದಗಳನ್ನು ಗುರುತಿಸಿ ಓದಲು ಸಾಧ್ಯವಾದರೂ ಗುಣಿತಾಕ್ಷರಗಳು ಇರುವ ಪದಗಳನ್ನು ಓದುವುದಕ್ಕೆ ಕಷ್ಟಪಡುತ್ತಿದ್ದರು. ಕೆಲವರಿಗೆ ಪದಗಳನ್ನು ಊಹಿಸಿ ಓದುವುದಕ್ಕೆ ಸಾಧ್ಯವಾದರೂ ಇನ್ನು ಕೆಲವರಿಗೆ ಗುಣಿತಾಕ್ಷರವನ್ನು ಗುರುತಿಸದ ಕಾರಣಕ್ಕೆ ಪದಗಳನ್ನು ಓದಲಾಗಲಿಲ್ಲ.

ಗುಣಿತಾಕ್ಷರವನ್ನು ಗುರುತಿಸುವುದಕ್ಕೆ ಸಹಾಯವಾಗುವಂತಹ ಹಲವಾರು ಆಸಕ್ತಿಕರ ಹಾಗೂ ಮೋಜಿನ ಚಟುವಟಿಕೆಗಳನ್ನು ಮಾಡಿಸಲಾಯಿತು. ಉದಾಹರಣೆಗೆ, ಮೊದಲಿಗೆ ಆ ಮತ್ತು ಈ ಗುಣಿತಗಳನ್ನು ಗುರುತಿಸಲು ಮುಖದ ಅಭಿವ್ಯಕ್ತಿಗಳು ಪರಿಣಾಮಕಾರಿ ಸಾಧನವೆಂದು ಸಾಬೀತಾಯಿತು. ಹಲಗೆಯ ಮೇಲೆ ಮನ್, ಮಾನಾ, ಮನಾ ಇಂತಹ ಕೆಲವು ಪದಗಳನ್ನು ಬರೆದು ಗಟ್ಟಿಯಾಗಿ ಓದಿದಾಗ ಮಕ್ಕಳು ಗುಣಿತಾಕ್ಷರಗಳನ್ನು ಬಳಸುವಾಗ ನಮ್ಮ ಮುಖದ ಅಭಿವ್ಯಕ್ತಿಗಳನ್ನು ಹಾಗೂ ತುಟಿಯ ಚಲನೆಗಳನ್ನು ಬಹಳ ಜಾಗರೂಕತೆಯಿಂದ ಗಮನಿಸಿದರು. ಆನಂತರ ನಮ್ಮನ್ನು ಅನುಕರಿಸುತ್ತಾ ಅಭ್ಯಾಸ ಮಾಡತೊಡಗಿದರು. ಇಷ್ಟರಲ್ಲಾಗಲೇ ನಾವು ಹೇಳಿದ್ದನ್ನು ಬಹಳ ಜಾಗರೂಕತೆಯಿಂದ ಗಮನಿಸುತ್ತ ಮತ್ತು ಕೇಳಿಸಿಕೊಳ್ಳುತ್ತ ಆ ಮತ್ತು ಈ ಗುಣಿತಾಕ್ಷರಗಳನ್ನು ಬಳಸುವಾಗ ಒಬ್ಬರ ಮುಖದ ಅಭಿವ್ಯಕ್ತಿಗಳು ಹಾಗೂ ತುಟಿಗಳ ಚಲನೆಗಳ ಬಗ್ಗೆ ತಿಳಿದಿದ್ದರು. ಮಕ್ಕಳು ತಮಗೆ ಗೊತ್ತಿದ್ದ ಕೆಲವು ಚಿಕ್ಕ ಪದಗಳನ್ನು ಗ್ರಹಿಸಿದರು ಉದಾಹರಣೆಗೆ ಗಮಲಾ. ಗಮಲ ಹಾಗೂ ಗಮಲಾ ಹೇಳುತ್ತಾ ಗುಣಿತಾಕ್ಷರ ಆ ಇರುವ ಅಥವಾ ಇರದಿರುವ ಪದಗಳನ್ನು ಅರ್ಥಮಾಡಿಕೊಳ್ಳ-ತೊಡಗಿದರು. ಈ ರೀತಿಯಲ್ಲಿ ಗುಣಿತಾಕ್ಷರ ಇರುವ ಪದಗಳನ್ನು ಓದಲು ಮಕ್ಕಳು ಕಲಿತುಕೊಂಡರು. ಇದಲ್ಲದೆ ಇ, ಈ, ಉ, ಊ, ಎ ಹಾಗೂ ಓ ಗುಣಿತಾಕ್ಷರಗಳನ್ನು ಪರಿಚಯಿಸುವುದಕ್ಕಾಗಿ ಮಕ್ಕಳ ಹೆಸರುಗಳು, ಅವರ ಹೆತ್ತವರ ಹಾಗೂ ಶಿಕ್ಷಕರ ಹೆಸರುಗಳನ್ನು

ಬಳಸಿದೆವು. ಉದಾಹರಣೆಗೆ ಖಿಲೇಶ್ವರಿ, ಕವಿತಾ, ಪರಿಧಿ, ಚಿತ್ರಾಂಶಿ, ಅನಿಲ್, ವಿವೇಕ್, ಹೇತಲ್, ಕೇಮನ್, ಸೊಹೇಲ್, ರೋಶ್ನಿ ಇವೇ ಮುಂತಾದವು. ಈ ಹೆಸರುಗಳಲ್ಲಿಯೇ ನಮಗೆ ಬಹುತೇಕ ಎಲ್ಲಾ ಅಕ್ಷರಗಳು ಹಾಗೂ ಗುಣಿತಾಕ್ಷರಗಳು ದೊರಕಿದವು.

ಹೆಸರುಗಳನ್ನು ಬಳಸಿದಾಗ ಮಕ್ಕಳಿಗೆ ಬಲುಬೇಗ ಉಚ್ಚಾರಣೆಯೊಂದಿಗೆ ಸಂಬಂಧ ಕಲ್ಪಿಸಿಕೊಳ್ಳಲು ಸಾಧ್ಯವಾಯಿತು ಹಾಗೂ ಇದೇ ರೀತಿಯ ಉಚ್ಚಾರಣೆ ಇರುವ ಇತರ ಪದಗಳನ್ನು ಯೋಚಿಸಿ ಹೇಳುವುದಕ್ಕೆ ಸಾಧ್ಯವಾಯಿತು. ದಾದಾ ಬರೆದ ನಂತರ ದಾದಿ ಅಥವಾ ಚಾಚಾ ಬರೆದ ನಂತರ ಚಾಚಿ ಈ ರೀತಿಯ ಕೆಲವು ಪದಗಳನ್ನು ಬರೆಯುವಾಗ ಮಕ್ಕಳು ಅಂತಹ ಪದಗಳ ರಚನೆಯ ಆಧಾರದ ಮೇಲೆ ಅವುಗಳ ಉಚ್ಚಾರಣೆಯನ್ನು ಊಹಿಸಿ ತಾವಾಗಿಯೇ ಓದುವುದಕ್ಕೆ ಸಾಧ್ಯವಾಯಿತು. ಗುಣಿತಾಕ್ಷರಗಳ ಪುನರಾವರ್ತನೆಯಾದಾಗ ಅಂತಹ ಗುಣಿತಾಕ್ಷರಗಳ ಆವರ್ತನಗಳ ಆಧಾರದ ಮೇಲೆ ಕೆಲವು ಕಥಾ ಹಂದರಗಳನ್ನೂ ಹೆಣೆಯಲಾಯಿತು. ಉದಾಹರಣೆಗೆ,

ಮೋನಾ ಔರ್ ರೋಮಾ ದೋ ಬೆಹನೆ ಥೀ। ಏಕ್ ದಿನ್ ದೊನೋ ದೋಡಕಿ ಬಜಾರ್ ಗಯೀ। ಬಜಾರ ಮೇ ದೋನೋ ನೇ ಸಮೋಸೆ ಖರಿದೆ। ಸಮೋಸೆ ಕೋ ಜೋಲೇ ಮೇ ರಖಾ। ಹೀಗೆಯೇ ಗುಣಿತಾಕ್ಷರ 'ಊ' ಗಾಗಿ ಲಾಲೂ-ಪೀಲೂ ಕಥೆಯನ್ನು ಹೇಳಲಾಯಿತು. ಈ ಕಥೆಗಳನ್ನು ದೊಡ್ಡ ಹಾಳೆಯ ಮೇಲೆ ಬರೆದು ಮಕ್ಕಳು ಇಡೀ ದಿನ ಅದನ್ನು ನೋಡುತ್ತ ಓದುವುದಕ್ಕಾಗಿ ತರಗತಿಯಲ್ಲಿ ತೂಗು ಹಾಕಲಾಯಿತು.

ಹೀಗೆ ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ನಲಿಯುತ್ತ ಕಲಿಯಲು ಆಟ-ಪಾಠ ಬೋಧನಾ ವಿಧಾನದ ಮೂಲಕ ಮಕ್ಕಳಲ್ಲಿ ಹಿಂದಿ ಭಾಷೆಯಲ್ಲಿ ಓದುವ ಹಾಗೂ ಬರೆಯುವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸಿದೆವು. ಈ ಅವಧಿ ಮುಗಿಯುವುದರ ಒಳಗೆ 10 ಮಕ್ಕಳಲ್ಲಿ 9 ಮಕ್ಕಳಾದರೂ ಹಿಂದಿ ಭಾಷೆಯ ಪದಗಳನ್ನು/ವಾಕ್ಯಗಳನ್ನು ಓದುವುದಕ್ಕೆ ಹಾಗೂ ಬರೆಯುವುದಕ್ಕೆ ಕಲಿಯುತ್ತಾರೆಂಬುದು ನಮ್ಮ ಆಶಯ. ಈ ಪ್ರಕ್ರಿಯೆಯಲ್ಲಿ ನಾವು ಹಲವಾರು ಸವಾಲುಗಳನ್ನು ಎದುರಿಸಿದ್ದು ಇತರ ಶಿಕ್ಷಕರೊಂದಿಗೆ ಮಾತನಾಡುತ್ತ ಮತ್ತು ಮಕ್ಕಳಿಂದ ಹಿಮ್ಮಾಹಿತಿ ಪಡೆಯುತ್ತಾ ಇವನ್ನು ನಿವಾರಿಸಿಕೊಂಡೆವು. ಮಕ್ಕಳು ಕಲಿಯುವುದಕ್ಕೆ ತೋರಿಸಿದ ತೀವ್ರವಾದ ಉತ್ಸಾಹ ಹಾಗೂ ಆಸಕ್ತಿಯ ಎದುರು ನಾವು ಎದುರಿಸಿದ ಸವಾಲುಗಳು ಏನೂ ಅಲ್ಲ ಎಂದು ನಮಗೆ ಅನಿಸಿತು.



ರೋಷನಿ ದೇವಾಂಗನ್ ಹಿಂದಿ ಸಾಹಿತ್ಯದಲ್ಲಿ ಎಂ.ಎ ಹಾಗೂ IGNOUನಿಂದ ಆರಂಭಿಕ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣ (ECCE) ವಿಷಯದಲ್ಲಿ ಡಿಪ್ಲೋಮಾ ಪಡೆದಿದ್ದು, 2017ರಿಂದ ಛತ್ತೀಸ್‌ಗಢ್‌ದ ಧಮ್‌ತರಿಯಲ್ಲಿರುವ ಅಜೀಮ್ ಪ್ರೇಮ್‌ಜಿ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ತರಗತಿಯ ಶಿಕ್ಷಕಿಯಾಗಿದ್ದಾರೆ. ಇವರಿಗೆ ಎಳೆಯ ಮಕ್ಕಳೊಂದಿಗೆ ಇರುವುದು, ಮಾತನಾಡುವುದು ಹಾಗೂ ಹಾಡುವುದೆಂದರೆ ಬಹಳ ಪ್ರೀತಿ. ಅವರು ತಮ್ಮ ಬಿಡುವಿನ ಸಮಯದಲ್ಲಿ ಕಥೆ ಪುಸ್ತಕಗಳನ್ನು ಹಾಗೂ ಬೋಧನೆಗೆ ಸಂಬಂಧಪಟ್ಟ ಪುಸ್ತಕಗಳನ್ನು ಓದುವುದಕ್ಕೆ ಹಾಗೂ ಸಂಗೀತ ಕೇಳುವುದಕ್ಕೆ ಇಷ್ಟಪಡುತ್ತಾರೆ. roshni.dewangan@azimpremjifoundation.org ಇವರನ್ನು ಇಲ್ಲಿ ಸಂಪರ್ಕಿಸಬಹುದು.

ಅನುವಾದ: **ವಿನಯಾ ವಿಠ್ಠಲ** । ಪರಿಶೀಲನೆ: **ಲತಾ ಕೆ.ಸಿ.**

ಮಕ್ಕಳು ಆಗಾಗ ಈ ರೀತಿಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಹಿರಿಯರ ಕಣ್ಣಿಗೆ ಅರ್ಥವಿಲ್ಲದಂತೆ ಕಾಣುತ್ತಿರುತ್ತದೆ. 'ಓಹ್! ಅವನು ಹಗಲುಗನಸು ಕಾಣುತ್ತಿದ್ದಾನೆ', 'ಆತ ಆಟವಾಡುತ್ತಿದ್ದಾನೆ' ಅಥವಾ 'ಆತ ಸುಮ್ಮನೇ ಕಾಲಹರಣ ಮಾಡುತ್ತಿದ್ದಾನೆ' ಎಂಬುದಾಗಿ ಈ ಚಟುವಟಿಕೆಗಳನ್ನು ಸಾಮಾನ್ಯವಾಗಿ ವ್ಯಾಖ್ಯಾನಿಸಲಾಗುತ್ತದೆ. ಮೇಲೆ ಪ್ರಸ್ತಾಪ ಮಾಡಿದ ಪರಿಸ್ಥಿತಿಗಳಲ್ಲಿ ಮಗುವು ಏನನ್ನು ಕಲಿಯಲು ಸಾಧ್ಯ ಎಂದು ಯಾರಾದರೂ ಯೋಚಿಸಬಹುದು. ಕಲಿಕೆಯ ಬಗ್ಗೆ ಮಾತನಾಡುವ ಸಂದರ್ಭದಲ್ಲಿ, ನಾವು ಸ್ವಾಭಾವಿಕವಾಗಿ ಒಂದು ಮಗು ಪುಸ್ತಕಗಳಲ್ಲಿ ತಲ್ಲೀನವಾಗಿರುವ, ಹೋಮ್‌ವರ್ಕ್ ಮಾಡುತ್ತಿರುವ, ದೊಡ್ಡವರ ಮಾತನ್ನು ಕೇಳುತ್ತಿರುವ ಅಥವಾ ಬಾಯಿಪಾಠ ಮಾಡಿದ್ದನ್ನು ಹೇಳುವ ಚಿತ್ರವನ್ನೇ ಕಲ್ಪಿಸಿಕೊಳ್ಳುತ್ತೇವೆ. ಆದರೆ ಕೆಲವು ಸಂದರ್ಭಗಳಲ್ಲಿ ಕಲಿಕೆಯು ಕೇವಲ ಒಂದು ಫಲಿತಾಂಶವಲ್ಲ, ಅದು ನಿರಂತರ ಹಾಗು ಚಾಲ್ತಿಯಲ್ಲಿರುವ ಪ್ರಕ್ರಿಯೆ ಎಂಬುದನ್ನು ಕೂಡ ನಾವು ತಿಳಿದುಕೊಳ್ಳಬೇಕಾಗುತ್ತದೆ.

– ರಿತಿಕಾ ಗುಪ್ತಾ, ಮಕ್ಕಳು ಯಾವಾಗ ಮತ್ತು ಹೇಗೆ ಕಲಿಯುತ್ತಾರೆ ಎಂಬುದರ ಅರ್ಥೈಸುವಿಕೆ, ಪುಟ 22